# ಪ್ರಜಾಪ್ರಭುತ್ವವನ್ನು ಮುಂದೊಯ್ಯುವ ನಿಟ್ಟಿನಲ್ಲಿ ಪಠ್ಯಪುಸ್ತಕಗಳು

ಹೃದಯಕಾಂತ್ ದೀವಾನ್

**ಪೀಠಿಕೆ**

ಪ್ರಜಾಪ್ರಭುತ್ವದ ಪರಿಕಲ್ಪನೆಯು ಇತ್ತೀಚಿನ ಶತಮಾನಗಳಲ್ಲಿ ಮಾನವ ಸಮಾಜಗಳನ್ನು ಕುರಿತು ರಚನಾತ್ಮಕ ಚರ್ಚೆಯನ್ನು ಹುಟ್ಟುಹಾಕಿದೆ. ಸಮಾಜ ನಿರ್ಮಾಣ ಸಾಧ್ಯವಾಗಿಸುವ ಪ್ರಯತ್ನಕ್ಕೆ ಅದೇ ಪ್ರಮುಖ ಆಧಾರಸ್ತಂಭವಾಗಿದೆ. ಪ್ರಜಾಪ್ರಭುತ್ವವು ಸಮಾಜದಲ್ಲಿ ಹೇಗೆ ಪ್ರಕಟಗೊಳ್ಳಬೇಕು ಎಂಬುದನ್ನು ಪರಿಗಣಿಸಲು ವಿವಿಧ ಮಾರ್ಗಗಳಿವೆ. ಆದರೆ, ಪ್ರಜಾಪ್ರಭುತ್ವ ಪರಿಕಲ್ಪನೆಯ ಪ್ರಮುಖ ಅಂಶಗಳೆಂದು ಪರಿಗಣಿಸಬಹುದಾದ ವಿಶಾಲವೂ ವಿಶಿಷ್ಟವೂ ಆದ ಗುಣಲಕ್ಷಣಗಳಿವೆ. ಭಾರತದ ಸಂವಿಧಾನದ ಪೀಠಿಕೆಯು ಪರಿಗಣಿಸುವ ಆ ಅಂಶಗಳೆಂದರೆ:

ಎ. ಸಮಾನ ಸ್ಥಾನಮಾನ ಮತ್ತು ಅವಕಾಶ. ಇದು, ಸಮಾಜದ ಎಲ್ಲ ಆಗುಹೋಗುಗಳ ಎಲ್ಲ ಅಂಶಗಳಲ್ಲಿಯೂ ಸಮಾನವಾಗಿ ಪಾಲ್ಗೊಳ್ಳುವ ಅವಕಾಶವನ್ನು ನೀಡುತ್ತದೆ.

ಬಿ. ಸ್ವಂತ ಆಲೋಚನೆ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು ಆರಾಧನೆಯ ಸ್ವಾತಂತ್ರ್ಯ. ಈ ಒಕ್ಕಣೆಯ ಪದಗಳನ್ನು ಅತಿಯಾಗಿ ಬಾಗಿಸಲಾಗಿದ್ದು, ಸಾಮಾನ್ಯವಾಗಿ ಹೇಳಲಾಗುವ ಧರ್ಮ ಮತ್ತು ಅದರ ಆಚರಣೆಯನ್ನಷ್ಟೇ ಅವು ಒಳಗೊಂಡಿರುವುದಲ್ಲ. ಈ ಎರಡನ್ನು ಜೊತೆಯಾಗಿ ಪರಿಗಣಿಸಿದರೆ, ತಮ್ಮ ಸ್ವಂತ ಆಲೋಚನೆ ಮತ್ತು ಕಲ್ಪನೆಗಳೊಂದಿಗೆ ದೇಶ ನಿರ್ಮಾಣ ಮಾಡುವ ಜನರನ್ನೊಳಗೊಂಡ ಸಮುದಾಯದ ಭಾಗವಾಗುವ ಸ್ವಾತಂತ್ರ್ಯವಾಗಿರುತ್ತದೆ.

ಸಿ. ಮೂರನೆಯದು, ಎಲ್ಲರಿಗೂ ಸಮಾನವಾದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಒದಗಿಸುವುದು ಹಾಗೂ ಕೊನೆಯದು,

ಡಿ. ಭ್ರಾತೃತ್ವ- ಒಂದು ದೇಶವನ್ನು ರೂಪಿಸುವ ಎಲ್ಲ ನಾಗರಿಕರಲ್ಲಿ ನಾವೆಲ್ಲರೂ ಒಂದೇ ಎಂಬ ಭಾವ ಇರುವುದು.

ಅಂಬೇಡ್ಕರ್, ಸಂವಿಧಾನ ಬರೆಯುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸಿದ ವ್ಯಕ್ತಿ. ಅವರು ಪ್ರಜಾಸತ್ತಾತ್ಮಕ ಸಮಾಜ ನಿರ್ಮಾಣದ ಸಾಹಸದಲ್ಲಿ ಭ್ರಾತೃತ್ವವೇ ಕೇಂದ್ರ ಬಿಂದು ಎಂದು ನಂಬಿದ್ದರು. ಭ್ರಾತೃತ್ವದಲ್ಲಿ ಗಣನೀಯವಾದುದನ್ನು ಗಳಿಸದಿದ್ದರೆ, ಇತರ ಮೂರು ಅಂಶಗಳು ದೂರ ಉಳಿಯುತ್ತವೆ[1]. ಹಾಗಾಗಿ, ಪ್ರಜಾಸತ್ತಾತ್ಮಕ ನಾಗರಿಕರು ಇತರರ ಇರುವಿಕೆಯನ್ನು (ಅಸ್ತಿತ್ವ) ಗೌರವಿಸಬೇಕು ಹಾಗೂ ಸಮಾನತೆ ಮತ್ತು ನ್ಯಾಯದಲ್ಲಿನ ನಂಬಿಕೆಯಿಂದಾಗಿ ಹುಟ್ಟುವ ಅವರ ದೃಷ್ಟಿಕೋನ ಮತ್ತು ಕಲ್ಪನೆ/ಯೋಚನೆಗಳನ್ನೂ ಗೌರವಿಸಬೇಕು. ಇದರಿಂದ, ಅಂತಹ ಸನ್ನಿವೇಶದಲ್ಲಿ ಏನಾಗುತ್ತದೆ ಎಂಬುದನ್ನು ವಿಶ್ಲೇಷಿಸಲು ಮತ್ತು ಗುರುತಿಸಲು ಅವರು ಸಮರ್ಥರಾಗುತ್ತಾರೆ. ಅಲ್ಲದೆ, ರಾಷ್ಟ್ರಕ್ಕಾಗಿ ಏನು ಬೇಕು ಎಂಬ ಆಯ್ಕೆಯಲ್ಲಿ ನೆರವಾಗುತ್ತಾರೆ. ಈ ಕಾರಣದಿಂದ, ಮಾಹಿತಿಯನ್ನು ಶೋಧಿಸುವ ಮತ್ತು ಮೌಲ್ಯವನ್ನು ನಿರ್ಣಯಿಸುವ ಸಾಮರ್ಥ್ಯವನ್ನು ಹೊಂದಲು, ಅವರಲ್ಲಿ ತಾದಾತ್ಮ್ಯ (ಅನುಭೂತಿ) ಇರಬೇಕು ಮತ್ತು ಪ್ರಸ್ತುತ ಜನಸಂಖ್ಯೆಯಲ್ಲಿ ಇರುವ ವೈವಿಧ್ಯವನ್ನು

ಗ್ರಹಿಸಬೇಕು. ಇವೆಲ್ಲವೂ ಪ್ರಜಾಸತ್ತಾತ್ಮಕ ಸಮಾಜದ ಕೇಂದ್ರಬಿಂದುಗಳು ಎಂದು ನಾವು ಹೇಳಬಹುದು. ಈ ಪ್ರಜಾಸತ್ತಾತ್ಮಕ ಸಮಾಜಕ್ಕೆ ಎದುರಾಗುವ ಸವಾಲುಗಳಿಗೆ ನಾವು ಹೇಗೆ ಸ್ಪಂದಿಸಬೇಕು ಎಂಬುದಕ್ಕೆ ವಿವಿಧ ಆಯ್ಕೆಗಳಿವೆ. ಆದರೆ ಅವೆಲ್ಲವೂ ಇದೇ ಚೌಕಟ್ಟಿನಲ್ಲಿ ಇರಬೇಕಾಗುತ್ತದೆ.

**ಭಾರತೀಯ ಶಾಲೆಗಳು, ಪಠ್ಯಪುಸ್ತಕಗಳು ಮತ್ತು ಪ್ರಜಾಸತ್ತಾತ್ಮಕ ಪೌರತ್ವ**

ಭಾರತೀಯ ಸಮಾಜ ಮತ್ತು ಶಿಕ್ಷಣ ಹಾಗೂ ಪ್ರಜಾಪ್ರಭುತ್ವದ ನಡುವಿನ ಪರಸ್ಪರ ಪ್ರಭಾವವನ್ನು ಪರಿಗಣಿಸಿದರೆ, ನಾವು ಈ ನಾಲ್ಕು ಆಧಾರಸ್ತಂಭಗಳನ್ನು, ವಿಶೇಷವಾಗಿ, ಭ್ರಾತೃತ್ವದ ನೆಲೆಯನ್ನು, ಮನಸ್ಸಿನಲ್ಲಿಟ್ಟುಕೊಳ್ಳುತ್ತೇವೆ. ಶಾಲಾ ಕಾರ್ಯಕ್ರಮಗಳು ಮತ್ತು ಪಠ್ಯಪುಸ್ತಕಗಳು ಈ ಭ್ರಾತೃತ್ವವೆಂಬ ನೆಲೆಯನ್ನು ಎಷ್ಟು ಜಾಗರೂಕವಾಗಿ ಮತ್ತು ಕ್ರಿಯಾಶೀಲವಾಗಿ ಪರಿಗಣಿಸುತ್ತವೆ ಎಂಬುದು ಪ್ರಮುಖ ಪ್ರಶ್ನೆ. ವಿವಿಧ ಹಿನ್ನೆಲೆಯ ಮತ್ತು ಮನೋಧರ್ಮದ ಮಕ್ಕಳನ್ನು ಸ್ವಾಗತಿಸುವುದು ಮತ್ತು ಒಳಗೊಳ್ಳುವುದು ಇದರಲ್ಲಿ ಮೊದಲ ಹೆಜ್ಜೆ. ತಾವು ಘನತೆ ಮತ್ತು ಸ್ಪಷ್ಟ ಗುರಿಯ ಭಾವನೆಯಿಂದ ಪ್ರತಿನಿಧಿಸಲ್ಪಡುತ್ತಿದ್ದೇವೆ ಎಂದು ಮಕ್ಕಳಿಗೆ ಅನಿಸಬಲ್ಲುದೇ? ಶಾಲಾ ಕಾರ್ಯಕ್ರಮಗಳು, ಮಕ್ಕಳಲ್ಲಿ ಗುರಿಯ ವಿವೇಕವನ್ನು ಮತ್ತು ತಮ್ಮ ಬದುಕನ್ನು ಕುರಿತ ಅವರ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿವೆಯೇ?

*ಸಮಾನ ಅಂತಸ್ತು ಮತ್ತು ಸಮಾನ ಅವಕಾಶ*ಗಳ ಕುರಿತೂ ಇದೇ ರೀತಿಯ ಬೇಸರವಿದೆ. ಶಾಲೆಗಳು ಮಕ್ಕಳಿಗೆ ಅವರನ್ನು ಸಮಾನವಾಗಿ ಕಾಣಲಾಗುತ್ತಿದೆ ಎಂಬ ಭಾವ ತುಂಬುತ್ತವೆಯೇ? ಅದೇ ರೀತಿ ಅವರ ನಡುವೆ ಸಮಾನತೆಯನ್ನು ಸಾಧಿಸಲು ನೆರವಾದಾವೇ? ಅಂತಸ್ತಿನ ತಾರತಮ್ಯದಿಂದ ಮೇಲೆತ್ತಿ, ಅವರನ್ನು ಸಮಾನ ವೇದಿಕೆಗೆ ತಂದು ನಿಲ್ಲಿಸಬಲ್ಲವೇ? ಶಾಲೆಗಳು ಮತ್ತು ಪಠ್ಯಪುಸ್ತಕಗಳು ಬೇರೆ ಬೇರೆ ಹಿನ್ನೆಲೆಯ ಮಕ್ಕಳನ್ನು ಪರಸ್ಪರ ಬೆರೆಯುವಂತೆ ಮಾಡಬಲ್ಲವೇ? ಹಾಗೆಯೇ, ಸಮಾನತೆಯ ಭಾವವನ್ನು ಬೆಳೆಸುವ ಮತ್ತು ಆ ಪ್ರಕಾರ ಕಾರ್ಯ ನಿರ್ವಹಿಸಲು ಸಾಧ್ಯವಾಗಿಸುವ ಗುಂಪುಗಳಿಗೆ ಅವು ಪರಿವರ್ತಕಗಳಾಗಬಲ್ಲವೇ?

ಸಾರ್ವತ್ರಿಕ ಶಿಕ್ಷಣ ಮತ್ತು ಅದರ ಸಾಧ್ಯತೆಗಳನ್ನು ಕುರಿತು ಆರಂಭದಲ್ಲಿದ್ದ ಸಂಭ್ರಮ ಕಳೆದ 50 ವರ್ಷಗಳಲ್ಲಿ ಪಕ್ವವಾಗಿದೆ ಹಾಗೂ ಶಾಲಾ ಅನುಭವ, ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳು- ಇವೆಲ್ಲವೂ ಹಿಂದಿನಂತೆಯೇ ಸಾಮಾಜಿಕ ಸಂಯೋಜನೆಯನ್ನು ಮತ್ತೆ ಮತ್ತೆ ಹುಟ್ಟುಹಾಕುತ್ತಾ ಇವೆ ಎಂಬುದನ್ನು ಮನವರಿಕೆಯಾಗುವಂತೆ ಚರ್ಚಿಸಿ, ಪ್ರಾಯೋಗಿಕವಾಗಿ ತೋರಿಸಿ ಆಗಿದೆ. ವಾಸ್ತವವಾಗಿ, ಶಾಲೆಯು ಇದನ್ನೇ ಸ್ಥಾಪಿಸುತ್ತದೆ ಮತ್ತು ಮರುಪೂರಣ ಮಾಡುತ್ತಿದೆ.

ಆದಾಯ, ಅಂತಸ್ತು ಮತ್ತು ಪಾತ್ರಗಳಲ್ಲಿ ಸದ್ಯ ಇರುವ ಅಂತರವನ್ನು ಕಡಮೆಗೊಳಿಸುವ ನಿಟ್ಟಿನಲ್ಲಿ ಶಾಲೆಯು ಅವಕಾಶ ಸೃಷ್ಟಿಸಬಹುದು. ಅಷ್ಟೇ ಅಲ್ಲ, ಸಮುದಾಯಗಳ ನಡುವೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡಬಹುದು ಎಂದು ಶೈಕ್ಷಣಿಕ ವಿಸ್ತರಣೆಗಳ ಆರಂಭಿಕ ವರ್ಷಗಳಲ್ಲಿ ತೋರಿಸಲಾಗಿತ್ತು. ಆದರೆ ನಿಧಾನವಾಗಿ ಶಾಲೆಗಳ ಸ್ವರೂಪವೇ ಬದಲಾಗಿ, ಮಕ್ಕಳ ವಿವಿಧ ಹಿನ್ನೆಲೆಗಳಿಗೆ ಅನುಗುಣವಾಗಿ ವ್ಯವಸ್ಥಿತವಾಗಿ ಅವರನ್ನು ಬೇರ್ಪಡಿಸುವ ವಿವಿಧ ಬಗೆಯ ಶಾಲೆಗಳು ಹುಟ್ಟಿಕೊಂಡವು. ಈ ಶಾಲೆಗಳಲ್ಲಿ ಪಠ್ಯಕ್ರಮದ ನಿರೀಕ್ಷೆಗಳು ಮತ್ತು ಶಿಕ್ಷಕರ ಪ್ರಯತ್ನಗಳೂ ಮಕ್ಕಳ ಹಿನ್ನೆಲೆಗಳ ನಡುವೆ ಸಾಕಷ್ಟು ಅಂತರವಿದೆ ಎಂಬುದರ ಅರಿವನ್ನು ಪ್ರದರ್ಶಿಸಿದವಲ್ಲದೆ, ತಳಮಟ್ಟದಲ್ಲಿರುವ ಮಕ್ಕಳಿಗೆ ವಾಸ್ತವವಾಗಿ ಯಾವುದೇ ಭರವಸೆಯನ್ನು ನೀಡಲಿಲ್ಲ. ಆಗಲೂ,

ಈಗಲೂ, ಕೆಲವರು ಕೆಳಸ್ತರದ ಸಮುದಾಯದಿಂದ ಬಂದವರು ಮೇಲಿನ ಹಂತಕ್ಕೆ ತಲಪಿ ತಮ್ಮ ಅವಕಾಶವಂಚಿತ ಹಿನ್ನೆಲೆಗೆ ಸೀಮಿತವಾದ ತಮ್ಮ ಅದೃಷ್ಟದಿಂದ ತಪ್ಪಿಸಿಕೊಳ್ಳುತ್ತಾರೆ. ಆದರೆ ಇವು ಅಪರೂಪದವಾಗಿದ್ದು, ವ್ಯವಸ್ಥೆಯಲ್ಲಿನ ಸಾಧ್ಯತೆಗಳನ್ನು ಸಮರ್ಥಿಸಿಕೊಳ್ಳುವ ಮಾದರಿಗಳೆಂದು ಪರಿಗಣಿಸಲ್ಪಟ್ಟಿದ್ದರೂ, ವಾಸ್ತವವಾಗಿ ಇವು ಶಾಲೆ ಮತ್ತು ಅದರ ಕಾರ್ಯಕ್ರಮದ ನಿಜ ಸ್ವರೂಪವನ್ನು ಎತ್ತಿತೋರುವ ಕೆಲವೇ ಪ್ರತಿ -ಉದಾಹರಣೆಗಳಾಗಿವೆ.

**ಶಿಕ್ಷಣ, ಪಠ್ಯಪುಸ್ತಕ ಮತ್ತು ಸಮನ್ವಯತೆ**

ನಮ್ಮ ಶಿಕ್ಷಣ ವ್ಯವಸ್ಥೆಯು ಅರ್ಧದಷ್ಟು ಅರ್ಹತೆಯನ್ನು ಆಧಾರವಾಗಿ ಹೊಂದಿರುವ ಕಾರಣ ಅದು ಸ್ವಲ್ಪ ಮಟ್ಟಿಗೆ ವಾಲಿಕೊಂಡಂತಿದೆ. ಎಲ್ಲರ ಬೆಳವಣಿಗೆಗೆ ಅದು ಸಮಾನ ಅವಕಾಶಗಳನ್ನು ಕೊಡುವುದಿಲ್ಲ. ಆದರೆ ಔಪಚಾರಿಕ ಮತ್ತು ಅನೌಪಚಾರಿಕ ಎರಡೂ ಒಂದು ಜವಾಬ್ದಾರಿಯುತ ಮತ್ತು ವಿಭಿನ್ನವಾದ ಕಾರ್ಯಪಡೆಯನ್ನು ಪುನರುತ್ಪಾದಿಸಲು ಉದ್ದೇಶಿಸಿವೆ. ಅದು ಸಮಾನ ಅವಕಾಶವನ್ನು ಒದಗಿಸಬೇಕಾಗಿದ್ದರೂ, ವಾಸ್ತವವಾಗಿ, ಬೇರೆ ಬೇರೆ ಹಿನ್ನೆಲೆಯ ಮಕ್ಕಳು ಹೋಗುವ ಶಾಲೆಗಳ ಸ್ವರೂಪ, ಆ ಮಕ್ಕಳಿಗೆ ಒದಗಿಸಲಾಗುವ ಸಾಮಗ್ರಿಗಳು, ಅವರನ್ನು ನಡೆಸಿಕೊಳ್ಳುವ ರೀತಿ ಮತ್ತು ಮಕ್ಕಳ ಪೋಷಕರು ಹಾಗೂ ಸಮಾಜದೊಂದಿಗೆ ಶಾಲೆಗಳು ವ್ಯವಹರಿಸುವ ರೀತಿಯು ಅವಕಾಶಗಳನ್ನು ಗರಿಷ್ಠ ಮಟ್ಟದಲ್ಲಿ ಅಸಮಾನವಾಗಿಸುತ್ತವೆ. ಅವಕಾಶವಂಚಿತ ಹಿನ್ನೆಲೆಗಳಿಂದ ಬಂದ ಮಕ್ಕಳ ಭಾಷೆ ಮತ್ತು ಸಂಸ್ಕೃತಿಯನ್ನು ಶಾಲೆಗಳು ಅಪಹಾಸ್ಯ ಮಾಡುವುದಲ್ಲದೆ ತಿರಸ್ಕಾರದಿಂದ ನೋಡುತ್ತವೆ.

ಶಾಲಾ ಕಾರ್ಯಕ್ರಮಗಳು ಮತ್ತು ಪಠ್ಯಪುಸ್ತಕಗಳು, ವಿದ್ಯಾರ್ಥಿಗಳಲ್ಲಿ ಯಜಮಾನ್ಯ ಮೌಲ್ಯವುಳ್ಳ ವ್ಯವಸ್ಥೆಯನ್ನು ಪ್ರಶ್ನಾತೀತವಾಗಿ ಒಪ್ಪಿಕೊಳ್ಳುವಂತಹ ವ್ಯವಸ್ಥೆಯನ್ನು ಸೃಷ್ಟಿಸುವ ಪ್ರಯತ್ನದತ್ತ ಗಮನ ಕೇಂದ್ರೀಕರಿಸುತ್ತವೆ. ಅದು ತಾನು ಅಪೇಕ್ಷಿಸಿದ ಲಿಂಗ, ಜಾತಿ ಮತ್ತು ವರ್ಗವನ್ನು ಒಪ್ಪುವಂತೆ ವಿದ್ಯಾರ್ಥಿಗಳು ಬೆಳೆಯಬೇಕೆಂದು ಅಪೇಕ್ಷಿಸುತ್ತದೆ. ಮೇಲೆ ಪ್ರಸ್ತಾವಿಸಿದಂತೆ, ಅವರಲ್ಲಿ ಕೆಲವರಿಗೆ ಮಾತ್ರ ಉತ್ತಮ ಆರ್ಥಿಕ ಸ್ಥಿತಿಯನ್ನು ಮತ್ತು ವೃತ್ತಿಪರ ಆಯ್ಕೆಗಳನ್ನು ತಮ್ಮದಾಗಿಸಿಕೊಳ್ಳುವ ಅವಕಾಶ ಸಿಗುವುದುಂಟು. ಆದರೆ ಯಾವುದೇ ಸಾಮಾಜಿಕ ಗುಂಪುಗಳಲ್ಲಿ ಸಮಾನ ಅವಕಾಶಗಳು ಇರುವುದು ಕಂಡುಬರುವುದಿಲ್ಲ. ಹೀಗೆ ಶಿಕ್ಷಣವು, ಕೆಲವು ಕ್ರಾಂತಿಕಾರಿಗಳನ್ನೂ, ವಿಚಾರವಾದಿಗಳನ್ನೂ (ಸುಧಾರಣಾವಾದಿ) ಹುಟ್ಟುಹಾಕುತ್ತಿದ್ದರೂ, ಅಸಮಾನತೆಯನ್ನು ಪುನುರುತ್ಪಾದಿಸಿ, ಕಾನೂನುಬದ್ಧಗೊಳಿಸುತ್ತಿದೆ.

ಅಲ್ಲದೆ, ಇದರಿಂದಾಗಿಯೇ ಅಸಮಾನತೆ ಮತ್ತು ಪ್ರಾಬಲ್ಯದ ಸ್ಥಿರತೆಯ ಪ್ರಬಲ ಪ್ರತಿಪಾದಕರು ತೀವ್ರವಾದ ಆಕ್ರಮಣ ಮಾಡುವುದನ್ನು ನಾವು ಕಾಣುತ್ತೇವೆ. ಕಳೆದ ದಶಕಗಳಿಂದ ವಿಶ್ವವಿದ್ಯಾಲಯಗಳ ಮೇಲೆ, ಪಠ್ಯಪುಸ್ತಕಗಳ ಮೇಲೆ ದಾಳಿ ಸಾಮಾನ್ಯವಾಗಿದ್ದು, ಭಯ, ಆತಂಕ, ಸ್ವಾರ್ಥ ಕೇಂದ್ರಿತವಾಗಿ ನಲುಗಿರುವ ಸಮಾಜದಲ್ಲಿ, ಸಾಧ್ಯವಾದಷ್ಟು ಪ್ರತ್ಯೇಕಿಸುವ *ಅನ್ಯರು* ಎಂದು ಘೋಷಿಸುವ ಬಯಕೆಯು ಇನ್ನಷ್ಟು ಹರಿತವಾಗಿ ಹಾಗೂ ಹಿಂಸಾತ್ಮಕ ಸ್ವರೂಪದೊಂದಿಗೆ ವಿಸ್ತರಿಸಲ್ಪಡುತ್ತಿದೆ.

**ಪಠ್ಯಕ್ರಮ, ಪಠ್ಯಪುಸ್ತಕಗಳು ಮತ್ತು ರಾಷ್ಟ್ರ**

ರಾಷ್ಟ್ರದ ಪರಿಕಲ್ಪನೆಯ ಮೇಲಿನ ದಾಳಿಯಿಂದ ಹಾಗೂ ಅಲ್ಲಿ ವಾಸಿಸುವ *ವೈವಿಧ್ಯಮಯ ಜನರು ಮತ್ತು ಅವರ ಆಚರಣೆ*ಗಳನ್ನು ಒಡೆಯುವುದರಿಂದ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳೂ ಕೂಡಾ ತೊಂದರೆಗೊಳಗಾಗಿವೆ. ಇತ್ತೀಚೆಗೆ ಹೆಚ್ಚುವರಿಯಾಗಿ ಸೇರ್ಪಡೆಯಾಗಿರುವ ದೇಶಭಕ್ತಿಗೆ ಪ್ರಾಶಸ್ತ್ಯ ಎನ್ನುವುದು, ಗಡಿಗಳ ಮೇಲೆ ಕೇಂದ್ರೀಕೃತವಾಗಿದ್ದು, ಬೇರೆ ರಾಷ್ಟ್ರಗಳನ್ನೂ ಒಳಗೊಂಡಂತೆ ಇತರರ ಮೇಲೆ ಪ್ರಾಬಲ್ಯ ಮೆರೆಯುವಲ್ಲಿ ಶ್ರೇಷ್ಠತೆಯ ಮತ್ತು ಹೆಮ್ಮೆಯ ಭಾವ ಪ್ರದರ್ಶಿಸುತ್ತದೆ. ಸಂವಿಧಾನ ಮತ್ತು ಪ್ರಜಾಸತ್ತಾತ್ಮಕ ನಾಗರಿಕರು ಸೂಚಿಸಿರುವ ಸಂವೇದನೆಗಳಿಗೆ ಬದ್ಧರಾಗದೆ ರಾಷ್ಟ್ರಕ್ಕೆ ಸಂಬಂಧಪಟ್ಟವರು ಎಂಬ ಭಾವನೆಗಳನ್ನು ನೀಡುವುದಲ್ಲದೆ, ಅನ್ವೇಷಣೆ, ಮುಕ್ತ ಅಭಿವ್ಯಕ್ತಿ ಮತ್ತು ಆಯ್ಕೆಯ ಅನುಷ್ಠಾನದ ಸ್ಥಳಾವಕಾಶ ಇವೆಲ್ಲವೂ ಕಡಮೆಯಾಗಲು ಕಾರಣವಾಗಿವೆ.

ರಾಜ್ಯದ ಕಾರ್ಯನಿರ್ವಹಣೆಯನ್ನು ಗಂಭೀರವಾಗಿ ಪರಾಮರ್ಶಿಸುವ ಎಲ್ಲ ವಿಚಾರಗಳು, ಪ್ರಜಾಪ್ರಭುತ್ವಕ್ಕೆ ತದ್ವಿರುದ್ಧವಾದ ವೈಯಕ್ತಿಕ ಅನುಭವಗಳ ಬಗ್ಗೆ ಸಂವಾದ ನಡೆಸುವುದು- ಪಠ್ಯಕ್ರಮ, ಪಠ್ಯಪುಸ್ತಕಗಳು, ತರಗತಿಗಳು ಅಥವಾ ಶಿಕ್ಷಣ ಸಂಸ್ಥೆಗಳಲ್ಲಾಗಲಿ - ದೇಶದ್ರೋಹದ ಕೃತ್ಯಗಳೆಂದು ಪರಿಗಣಿಸಲ್ಪಟ್ಟಿವೆ. ಶಾಲೆಗೆ ಬರುವ ಮಕ್ಕಳ ಸಾಮಾಜಿಕ ವಸ್ತುಸ್ಥಿತಿಗಳನ್ನು ಮತ್ತು ವೈವಿಧ್ಯಮಯ ಸಂಸ್ಕೃತಿಗಳನ್ನು ಬಿಂಬಿಸುವ ರೀತಿಯನ್ನು ಶುಚಿಗೊಳಿಸಿ, ಮುಖ್ಯವಾಗಿ, ಮಧ್ಯಮವರ್ಗದ ಉದಾರವಾದವೆಂಬ ಕುಂಚದಿಂದ ಅದನ್ನು ಚಿತ್ರಿಸುವ ನಗ್ನಸತ್ಯವನ್ನು ಕತ್ತರಿಸಬೇಕಾಗಿದೆ. ಮೇಲ್ವರ್ಗದವರ ಪ್ರಾಬಲ್ಯದ ಮತ್ತು ಯಜಮಾನಿಕೆಯ ಕೆಟ್ಟ ಪ್ರದರ್ಶನಕ್ಕಿಂತಲೂ ಹೆಚ್ಚಾಗಿ, ಅವರ ಮಕ್ಕಳನ್ನು, ಮನೆ, ಕುಟುಂಬ, ಅವರಿಗೆ ಲಭ್ಯವಿರುವ ಸಂಪನ್ಮೂಲಗಳನ್ನು, ಅವರ ಉಡುಪುಗಳನ್ನು, ಅವರು ಆಡುವ ಆಟಗಳನ್ನು ಅಥವಾ ಅವರ ಶ್ರೀಮಂತಿಕೆಯನ್ನು, ಅವರೆಷ್ಟು ಶಕ್ತಿಶಾಲಿಗಳು ಮತ್ತು ಗಣ್ಯರು ಎಂಬುದನ್ನು ಬಿಂಬಿಸುವ ಚಿತ್ರಗಳನ್ನು ಸ್ವೀಕಾರಾರ್ಹ ಮತ್ತು ಸರಿಯಾದ ವರ್ತನೆ ಎಂಬಂತೆ ಬಿಂಬಿಸಲಾಗುತ್ತಿದೆ. ಪುಸ್ತಕಗಳಲ್ಲಿ ಕೂಡಾ ಬಹುಸಂಖ್ಯಾತ ಜನರ ಬದುಕಿನ ಅನುಭವಗಳು ಮತ್ತು ಆಯ್ಕೆಗಳನ್ನು ಹೊರಗಿಟ್ಟು, ಮೇಲ್ವರ್ಗದ ಜನರದ್ದೇ ನಡವಳಿಕೆ, ಅವರು ಬದುಕುವ ರೀತಿ, ನಂಬಿಕೆಗಳು ಮತ್ತು ಅನುಭವಗಳನ್ನು ಕಾಣಬಹುದು. ಅವರ ಬದುಕು, ಬದುಕುವ ರೀತಿ ಮತ್ತು ಆಚರಣೆಗಳನ್ನೇ, ವಿಲಾಸಿ ಜೀವನಶೈಲಿ ಎಂಬಂತೆ, ಹೊರಗಿನ ಮುಖ್ಯವಾಹಿನಿಯ ಶಾಲೆಗಳಿಗೆ ಅದುವೇ ಅಪೇಕ್ಷಿತ ಗುರಿ ಎಂಬಂತೆ ಅತ್ಯುತ್ತಮ ರೀತಿಯಲ್ಲಿ ಬಿಂಬಿಸಲಾಗುತ್ತದೆ. ಹಾಗೂ ಅಪರೂಪಕ್ಕೊಮ್ಮೆ ಅದನ್ನು ತಿರಸ್ಕೃತ, ಅಲಕ್ಷಿತ ಮತ್ತು ಅಸಡ್ಡೆ ಮಾಡಬಹುದಾದ ರೀತಿಯಲ್ಲಿ ಬಿಂಬಿಸಲಾಗುತ್ತದೆ. ಯಥಾಸ್ಥಿತಿಯನ್ನು ಬಲವರ್ಧನೆಗೊಳಿಸುವಲ್ಲಿ ಹೆಚ್ಚು ಪರಿಣಾಮಕಾರಿಯಾದ ಸಂವೇದನಾಶೀಲತೆಯ ಬೆಳವಣಿಗೆಯಲ್ಲಿ, ಶಾಲಾ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳು ಶಿಕ್ಷಣವನ್ನು ಒಂದುಗೂಡಿಸುತ್ತವೆ.

**ಶಾಲೆ, ಪಠ್ಯಪುಸ್ತಕಗಳು ಮತ್ತು ಸಂಸ್ಕೃತಿ**

ಅದನ್ನು ಮಾಡಲು ಒಂದು ಪ್ರಮುಖ ಮಾರ್ಗವೆಂದರೆ, ಉನ್ನತ ಸಂಸ್ಕೃತಿ ಮತ್ತು ಅದರೊಂದಿಗೆ ನಂಟು ಹೊಂದಿರುವ ಉನ್ನತ ಭಾಷೆಯ ಬಗ್ಗೆ ನಿರಂತರವಾಗಿ ವಾದಿಸುವುದು. ಈ ಶ್ರೇಷ್ಠ ಭಾಷೆಯನ್ನು ಕಲುಷಿತಗೊಳಿಸಬಹುದೆಂಬ ಭಯದಿಂದಾಗಿ, ತರಗತಿಯಲ್ಲಿ ಮಕ್ಕಳು ತಮ್ಮ ಆಡುಭಾಷೆಯಲ್ಲಿ ಮಾತನಾಡಲು ಅನುವು ಮಾಡಿಕೊಡುವುದಿಲ್ಲ. ಪ್ರಬಲ (ಶ್ರೇಷ್ಠ) ಭಾಷೆಯೊಂದಿಗೆ ಮಕ್ಕಳ ಆಡುಭಾಷೆ ಮತ್ತು ಸಂಸ್ಕೃತಿಯನ್ನು ಬೆರೆಸುವ ಸಾಧ್ಯತೆ ಇದೆ ಎಂಬುದು ಇದಕ್ಕೆ ಕಾರಣ. ಮಾತ್ರವಲ್ಲ, ಸುಶಿಕ್ಷಿತರಾಗಲು ಮತ್ತು ಸಮರ್ಥರಾಗಲು

ಏಕಭಾಷಿಕತೆಯೇ ಸಮರ್ಥ ವ್ಯವಸ್ಥೆ ಎಂಬ ಅಬದ್ಧ ತತ್ತ್ವವೇ ಇದಕ್ಕೆ ಕಾರಣ. ಕಾಗುಣಿತ ದೋಷ, ಉಚ್ಚಾರಣೆ ಮತ್ತು ಕೈಬರಹದ ಪ್ರಗತಿಯ ಬಗ್ಗೆ ಅತಿಹೆಚ್ಚು ಗಮನ ಕೇಂದ್ರೀಕರಿಸಲಾಗುತ್ತದೆ. ಈ ಕೌಶಲಗಳನ್ನು ಹೊಂದಿಲ್ಲದ, ಕಲ್ಪನೆಗಳನ್ನು ಅಭಿವೃದ್ಧಿಪಡಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವವರಿಗೆ ಕೆಲಸ ಮಾಡುವ ದಕ್ಷ ಕೆಲಸಗಾರರಿಗೆ ಇವೆಲ್ಲದರ ಆವಶ್ಯಕತೆ ಇರುತ್ತವೆ ಲಿಪ್ಯಂತರ ಮಾಡಲು, ಗ್ರಾಹಕರ ಕರೆಗಳನ್ನು ಸ್ವೀಕರಿಸಲು ಮತ್ತು ಅಂತಹುದೇ ಇತರ ಪುನರಾವರ್ತನೆಯ ಮತ್ತು ಏಕಾಗ್ರತೆಯ ಅಗತ್ಯವುಳ್ಳ ಕೆಲಸಗಳನ್ನು ಮಾಡಲು ದೊಡ್ಡ ಸಂಖ್ಯೆಯ ಜನರೂ ಅವಶ್ಯ. ಆದರೂ, ಶಿಕ್ಷಕರು (ಬಹುಶಃ ಅವರು ತಪ್ಪಾಗಿ ನಂಬಿಕೊಂಡಿದ್ದಾರೆ ಅಥವಾ ಅದು ಅವರ ಪ್ರಸ್ತುತ ಅಸ್ಮಿತೆಯಾಗಿದೆ) ಯಾವ ರೀತಿ ತರಗತಿಗಳನ್ನು ನಡೆಸುತ್ತಾರೆಂದರೆ, ಅರ್ಥವಿಲ್ಲದ ಪುನರಾವರ್ತನೆಗಳನ್ನು ಮಾಡುವಂತೆ ವಿದ್ಯಾರ್ಥಿಗಳನ್ನು ಒತ್ತಾಯಿಸಲಾಗುತ್ತದೆ, ನಕಲು ಮಾಡುವುದನ್ನು ಮತ್ತು ವಿದ್ಯಾರ್ಥಿಗಳ ಸಂಸ್ಕೃತಿಯ ಎಲ್ಲ ಅಂಶಗಳನ್ನೂ, ಅವರ ಅಸ್ಮಿತೆ ಮತ್ತು ಭಾಷೆಯನ್ನೂ ದೂರವಿರಿಸುತ್ತಾ ಹೋಗುತ್ತಾರೆ. ಶಾಲೆಗೆ, ಯಾವುದೇ ಮಗುವಿನ ಬೆಳವಣಿಗೆಯನ್ನು ಕಾಣಬಹುದಾದ ಸರಿಯಾದ ಏಕೈಕ ಮಾರ್ಗವೆಂದರೆ, ಮಗು ತನ್ನ ಸುತ್ತಲಿನ ವಾಸ್ತವತೆಯಿಂದ ಪಾರಾಗಿ, ಗಣ್ಯರ ವರ್ತನೆಗಳು ಮತ್ತು ಮಾರ್ಗಗಳನ್ನು ಅನುಕರಿಸಲು ಯತ್ನಿಸುವ ಮೂಲಕ ವೈಯಕ್ತಿಕವಾಗಿ ವಿಮೋಚನೆ ಕಂಡುಕೊಳ್ಳುವುದು.

**ನಯೀ ತಾಲೀಮ್ ಪರ್ಯಾಯವೇ?**

*ನಯೀ ತಾಲೀಮ್*, ಶಿಕ್ಷಣದ ಪರ್ಯಾಯ ವ್ಯಾಖ್ಯಾನ ಮಾಡುವ ಕೆಲವು ನಿರರ್ಥಕ ಪ್ರಯತ್ನಗಳನ್ನು ಕೈಗೊಂಡಿತು ಅಲ್ಲದೆ, ಮಗು ಬೆಳೆಯುವ ಪರಿಸರಕ್ಕೆ, ವಾತಾವರಣಕ್ಕೆ (ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ) ಪಠ್ಯಪುಸ್ತಕವು ಹೊಂದಿಕೆಯಾಗುವಂತಿರಬೇಕು ಹಾಗೂ ಶಿಕ್ಷಕರೊಂದಿಗೆ ಸೇರಿ ಅದು ರಚನೆಯಾಗಿರಬೇಕು ಎಂಬ ತೀರ್ಮಾನಕ್ಕೆ ಬಂತು. ಅನಂತರದ ಸೂತ್ರೀಕರಣಗಳು ನಯೀ ತಾಲೀಮ್‌ನ ಆರಂಭಿಕ ತತ್ತ್ವಗಳಿಗೆ ಬದ್ಧವಾಗಿರಲಿಲ್ಲವಾದರೂ, ಮಗುವಿನ ಭಾಷೆ ಮತ್ತು ಸಂವಹನಕ್ಕೆ ಸಾಮಾನ್ಯ ಭಾಷೆ ಪ್ರಮುಖ ಅಂಶ ಎಂದು ಹೇಳಿತು. ಹಾಗಾದರೂ, ಆಧುನಿಕತೆಯ ಆವಶ್ಯಕತೆ ಮತ್ತು ರಾಜಕೀಯ ಬದಲಾವಣೆಗಳನ್ನು ಹಾಗೂ ಆರ್ಥಿಕತೆಯ ಯಥಾಸ್ಥಿತಿಯನ್ನು ಸಮರ್ಪಕವಾಗಿ ನಿಭಾಯಿಸಲು ದುರದೃಷ್ಟವಶಾತ್ ನಯೀ ತಾಲೀಮ್ ಮತ್ತು ಸಂಬಂಧಿಸಿದ ಅಭಿವೃದ್ಧಿಯ ಸಿದ್ಧಾಂತಗಳಿಗೆ ಸಾಧ್ಯವಾಗಲಿಲ್ಲ. ಎಲ್ಲ ಮಕ್ಕಳು ಒಟ್ಟುಗೂಡಿ, ಸ್ವತಃ ದೈಹಿಕ ಶ್ರಮ ಬೇಡುವ ಕೆಲಸ ಮಾಡಬೇಕು ಎಂಬುದು ಅವರ ಚಿಂತನೆಯಾಗಿತ್ತು. ತಮ್ಮ ಸುತ್ತಲಿನ ಪರಿಸರದಿಂದ ಮತ್ತು ಸಂಗತಿಗಳಿಂದ ತಮಗೆ ಮತ್ತು ತಮ್ಮ ಸಮುದಾಯಕ್ಕೆ ಪ್ರಸ್ತುತವೆನಿಸುವುದನ್ನು ಅವರು ಕಲಿಯಬೇಕು. ಸಮುದಾಯವು ಶಾಲಾ ಕಾರ್ಯಕ್ರಮವನ್ನು ಮುನ್ನಡೆಸುತ್ತದೆ; ಆ ಶಾಲೆಯು ಮಗುವಿನ ಆರ್ಥಿಕ, ಸಾಮಾಜಿಕ ಮತ್ತು ಭಾಷೆಯ ಸಂದರ್ಭಕ್ಕೆ ತಕ್ಕುದಾಗಿ ಇರುತ್ತದೆ ಎಂಬುದಾಗಿತ್ತು. ಇವೆಲ್ಲವೂ ಮಕ್ಕಳನ್ನು ಮತ್ತು ಸಮುದಾಯಗಳನ್ನು ಬೆಸೆಯಲು ನೆರವಾಗಿ, ಕಲಿಯುವ ಮಕ್ಕಳನ್ನು ಆರ್ಥಿಕತೆಯೊಂದಿಗೆ ಅರ್ಥಪೂರ್ಣವಾಗಿ ಜೋಡಿಸಬಹುದು ಹಾಗೂ ಆ ಮೂಲಕ ಮಕ್ಕಳು ಎಲ್ಲ ಬಗೆಯ ದೈಹಿಕ ಶ್ರಮದ ಕೆಲಸಗಳನ್ನು, ತಮ್ಮ ಭಾಷೆ, ಸಂಸ್ಕೃತಿ ಮತ್ತು ತಮ್ಮತನವನ್ನು ಗೌರವಿಸಲು ಸಹಾಯ ಮಾಡಬಹುದು. ಇದು ಮಕ್ಕಳಲ್ಲಿ ತಮ್ಮತನ ಬೇರೂರಿ, ಮರೀಚಿಕೆಯ ಬೆನ್ನು ಹತ್ತಿ ತಮ್ಮತನವನ್ನು ಕಳೆದುಕೊಳ್ಳದಿರಬಹುದು ಎಂದು ಭಾವಿಸಲಾಗಿತ್ತು. ನಿರ್ಣಾಯಕ ಅಂಶಗಳಾದ ಇವೆಲ್ಲವು ಅವರಿಗೆ ಸರಿಯಾಗಿ

ತಲಪಿ, ಅವರನ್ನು ಒಂದುಗೂಡಿಸಲು ಸಹಾಯವಾಗಿದ್ದರೆ, ನ್ಯಾಯ ಸಮಾನತೆಯ ಮತ್ತು ಅವಕಾಶದ ಪರಿಕಲ್ಪನೆಯತ್ತ ಅವರನ್ನು ಕೊಂಡೊಯ್ಯಲು ಸಾಧ್ಯವಾಗುತ್ತಿತ್ತು.

ಅವಿದ್ಯಾವಂತರಾಗಿರುವುದು ಮತ್ತು ಅವರು ನಯವಾಗಿ ಹೇಳುವಂತೆ, ವಿದ್ಯಾವಂತರಾಗಿರುವುದರ ವ್ಯತ್ಯಾಸದ ನಡುವಿನ ಸಮಸ್ಯೆಯ ಬಗ್ಗೆ ನಯೀ ತಾಲೀಮ್ ಕೂಡಾ ಪ್ರಸ್ತಾವಿಸಿತ್ತು. ಶಾಲೆಗಳು ನೀಡುವ ಶಿಕ್ಷಣವು, ಅಧಿಕಾರ ಮತ್ತು ಅಂತಸ್ತಿಗಾಗಿ ಹವಣಿಸುವಂತೆ, ಶೋಷಿಸುವಂತೆ ಮತ್ತು ಇತರರಿಗಿಂತ ತಾನು ಶ್ರೇಷ್ಠ ಎಂಬ ಭಾವ ಬರುವಂತೆ ಮಾಡುತ್ತದೆ ಎಂದು ಅದು ಎಚ್ಚರಿಸಿತ್ತು. ಅದು ಸಮನ್ವಯತೆಯನ್ನು, ಸ್ವೀಕಾರ ಮಾಡುವುದನ್ನು, ಅನುಕಂಪ, ಹಂಚಿಕೊಳ್ಳುವಿಕೆ. ಸಹಕಾರ ಮತ್ತು ಸಮಾನತೆಯ ಸಂವೇದನೆಗಳನ್ನು ಬೆಳಸಿಕೊಳ್ಳಲು ಅಥವಾ ಅಂತರ್ಗತಗೊಳಿಸಿಕೊಳ್ಳಲು ನೆರವಾಗಲಿಲ್ಲ. ಅದು ವಿದ್ಯಾರ್ಥಿಗಳನ್ನೂ ಮಾರ್ಪಾಡು ಮಾಡಲಿಲ್ಲ ಅಥವಾ ಜಗತ್ತು ಬದಲಾಗಲಿ ಎಂದು ಬಯಸುವಂತೆ ಮಾಡಲಿಲ್ಲ. ಬದಲಿಗೆ, ಅವರು ಹೆಚ್ಚು ಹೆಚ್ಚು ಅನುಭೋಗಿ ಗ್ರಾಹಕರಾಗುವಂತೆ ಆಸೆ ಹುಟ್ಟಿಸಿತು, ತಮಗೇ ಹೆಚ್ಚು ಬೇಕು ಎಂಬ ಸ್ವಾರ್ಥ ಮನೋಭಾವ, ಇತರರನ್ನು ಹಿಂದೆ ತಳ್ಳಿ ತಾನು ಮಾತ್ರ ಮೇಲೇರುವ ದುರಾಸೆಯನ್ನಷ್ಟೇ ಮಕ್ಕಳಲ್ಲಿ ಬೆಳೆಸಿತು.

ಆ ಶಿಕ್ಷಣವು ಸಮಾನತೆ, ನ್ಯಾಯ, ವಿಮೋಚನೆ ಮತ್ತು ಸ್ವಾತಂತ್ರ್ಯಕ್ಕಾಗಿ ಪ್ರಚೋದನೆಯನ್ನು ಬೆಳೆಸಲಿಲ್ಲ. ಅದಕ್ಕಾಗಿ ಬೇರೆಯವರು ವಾದಿಸಿದರು. ಸಮಾನ ಅವಕಾಶ, ತಮ್ಮ ಚಿಂತನೆ, ಭಾವನೆಗಳು, ಧರ್ಮದ ಇತ್ಯರ್ಥಗಳು ಹಾಗೂ ನ್ಯಾಯಕ್ಕೆ ಅವಕಾಶ ಒದಗಿಸಲು ಸಮರ್ಥ ಕಾರಣಗಳಿದ್ದರೂ, ವಿದ್ಯಾರ್ಥಿಗಳು ಇವೆಲ್ಲವನ್ನೂ ವಾದಿಸಿ, ಚರ್ಚಿಸಿ, ನಿರರ್ಗಳವಾಗಿ ಬರೆದರೂ, ಅವುಗಳು ಅವರ ಕಾರ್ಯರೂಪದಲ್ಲಿ ಪ್ರತಿಫಲಿಸುವುದೇ ಇಲ್ಲ. ಅವರಲ್ಲಿರುವ ಜ್ಞಾನವು ಜಗತ್ತನ್ನು ಬದಲಾಯಿಸಬೇಕೆಂಬ ಆಶಯವಾಗಿ ಮಾರ್ಪಾಡಾಗುವುದೇ ಇಲ್ಲ. ಅದು ಅವರನ್ನು ಸಮಾನ ಅವಕಾಶಗಳು, ನ್ಯಾಯ ಮತ್ತು ಅಭಿವ್ಯಕ್ತಿ ಹಾಗೂ ಪ್ರಾರ್ಥನೆಯ ಸ್ವಾತಂತ್ರ್ಯಕ್ಕಾಗಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವುದಿಲ್ಲ. ಅವರಲ್ಲಿ ಭ್ರಾತೃತ್ವದ ಮನೋಭಾವವನ್ನೂ ಹೆಚ್ಚಿಸುವುದಿಲ್ಲ.

ಹಾಗಾಗಿ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ನಿರ್ಮಿಸಿ, ಪಠ್ಯಪುಸ್ತಕಗಳು ಮಕ್ಕಳಲ್ಲಿ ಭ್ರಾತೃತ್ವವನ್ನು ಬೆಳೆಸಿ, ಒಳಗೊಳ್ಳುವಿಕೆಯ ಪ್ರಜ್ಞೆ ಬೆಳೆಸುವ ನಿಟ್ಟಿನಲ್ಲಿ ಕಠಿಣ ಪ್ರಯತ್ನ ಮಾಡುವುದೇ ಶಿಕ್ಷಣದ ಮುಂದಿರುವ ಸವಾಲು. ಇನ್ನು ಕೆಲವು ಬಗೆಯಲ್ಲಿ, ಅವಕಾಶದ ಸಮಾನತೆ, ನ್ಯಾಯದ ಪ್ರಜ್ಞೆ, ಸ್ವಾತಂತ್ರ್ಯ, ವಿಮೋಚನೆ, ಯೋಚನೆಗಳ ಅಭಿವ್ಯಕ್ತಿ ಮತ್ತು ಪ್ರಾರ್ಥನೆಯ ಸಾಧಾರಣ ರೂಪಗಳನ್ನೂ ಕೂಡ ಅದು ಚಿತ್ರಿಸಬಹುದು.

**ಶಿಕ್ಷಣದಿಂದ ಬದಲಾವಣೆ ಸಾಧ್ಯವೇ?**

ಕಳೆದ ಐವತ್ತು ವರ್ಷಗಳಲ್ಲಿ ಭಾರತದಲ್ಲಿ ಮತ್ತು ಪ್ರಪಂಚದಲ್ಲಿ, ಪ್ರತಿಯೊಬ್ಬರನ್ನೂ ವಿದ್ಯಾವಂತರನ್ನಾಗಿಸಬೇಕು ಮತ್ತು ಅದು ಗುಣಮಟ್ಟದಿಂದ ಕೂಡಿರುವುದನ್ನು ಖಾತರಿಪಡಿಸಿಕೊಳ್ಳುವ ತೀವ್ರ ಪ್ರಯತ್ನವನ್ನು ಮಾಡಲಾಗಿದೆ. ಎನಾಯನ್ ಅವರು ಎತ್ತಿ ತೋರಿಸುವಂತೆ, ಇತರ ವಿದ್ವಾಂಸರ ಮಾತನ್ನು ಉಲ್ಲೇಖಿಸುವಂತೆ, ಶಿಕ್ಷಣದ ಪ್ರಗತಿ ಮತ್ತು ದೇಶಗಳಾದ್ಯಂತ ಸಮಾನ ಅವಕಾಶ ಮತ್ತು ಶೈಕ್ಷಣಿಕ ವ್ಯವಸ್ಥೆಯ ಕಾರ್ಯ ನಿರ್ವಹಣೆಯ ಸ್ವರೂಪ ಮತ್ತು ಅವುಗಳ ಪ್ರಕ್ರಿಯೆಗಳು, ಯಥಾಸ್ಥಿತಿಯನ್ನು ಬದಲಾಯಿಸಲು ಸಾಧ್ಯವಿಲ್ಲದ ರೀತಿಯಲ್ಲಿ ಮುನ್ನಡೆಸಲ್ಪಟ್ಟಿವೆ. ಅವರು

ಮತ್ತು ಇತರ ಅನೇಕರು, ನಾವು ಏನೇ ಮಾಡಿದರೂ ಅದರ ಪರಿಣಾಮಕ್ಕೆ ಮಿತಿ ಇರಬಹುದು ಎಂಬುದನ್ನು ನಾವು ಮನಗಾಣಬೇಕು ಎಂದು ವಾದಿಸಿದ್ದಾರೆ. ಹೆಚ್ಚಿನ ಪ್ರಭಾವವು ಕುಟುಂಬ, ಸುತ್ತಲಿನ ಸಮಾಜ ಮತ್ತು ಆರ್ಥಿಕ ಆವಶ್ಯಕತೆಗಳಿಂದ ಉಂಟಾಗುತ್ತದೆ. ಮಕ್ಕಳಿಗೆ ಒಳಗೊಳ್ಳುವಿಕೆಯ ಹಾಗೂ ಸಮಾನ ಅವಕಾಶದ ಭಾವ ಬರಬೇಕಾದರೆ ಸಾಮಾಜಿಕ ಮತ್ತು ರಾಜಕೀಯ ನಡವಳಿಕೆಯಲ್ಲಿ ಬದಲಾವಣೆ ಆಗಬೇಕು.

ಒಂದು ಬಗೆಯ ಪಠ್ಯಪುಸ್ತಕಗಳ ಮೂಲಕ ಮಕ್ಕಳು ಶಾಲೆಯಲ್ಲಿ ಇರುವ ಅಲ್ಪಾವಧಿಯಲ್ಲಿ ಸಮಾನತೆಯ ಬದಲಾವಣೆಯನ್ನು ಬಿಂಬಿಸುವುದು ಸುಲಭದ ಮಾತಲ್ಲ. ಬಹು ಸಾಮಾಜಿಕ ಪ್ರಕ್ರಿಯೆಗಳು, ಆಚರಣೆಗಳು ಮತ್ತು ಲಭ್ಯವಿರುವ ದೊಡ್ಡ ಪ್ರಮಾಣದ ಸಾಹಿತ್ಯಗಳು ಪ್ರಧಾನವಾಗಿ ಮಕ್ಕಳಲ್ಲಿ ಒಬ್ಬರ ಬಗ್ಗೆ ಶ್ರೇಷ್ಠತೆಯನ್ನು ಹಾಗೂ ಇತರರ ಬಗ್ಗೆ ತಿರಸ್ಕಾರದ ಭಾವವನ್ನು ತಳೆಯುವಂತೆ ಪ್ರೋತ್ಸಾಹಿಸುತ್ತವೆ. ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಧಾರ್ಮಿಕ ಆಚರಣೆಗಳು, ಅನುಕಂಪ ಮತ್ತು ನಮ್ರತೆಯ ಪ್ರಜ್ಞೆಯನ್ನು ಬೇಡುತ್ತವೆ ಮತ್ತು ಹಾಗೆಯೇ, ಮಕ್ಕಳ ಕಲ್ಪನೆ ಹಾಗೂ ಆಲೋಚನೆಗಳನ್ನು ಕೇಳುವ, ಹಂಚಿಕೊಳ್ಳುವ ಅವಕಾಶವನ್ನು ಸೃಷ್ಟಿಸುವ ಅಗತ್ಯವನ್ನು ಒತ್ತಿ ಹೇಳುತ್ತವೆ. ತಮ್ಮ ಆಲೋಚನೆಗಳ ಬಗ್ಗೆ ಮಾತನಾಡಲು ಅವರಿಗೆ ಅವಕಾಶ ಮತ್ತು ಅವರ ಕಲಿಕೆಗೆ ಹಾಗೂ ಆಲೋಚನೆಗಳಿಗೆ ಉತ್ತೇಜನ ಸಿಗಬೇಕು. ಅವರ ಆಲೋಚನೆಗಳು ಸರಿಯಿಲ್ಲದಿದ್ದಾಗಲೂ, ಅವರು ತಮ್ಮ ಆಲೋಚನೆಗಳನ್ನು ಯಾಕೆ ಬದಲಾಯಿಸಿಕೊಳ್ಳಬೇಕು ಎಂಬ ಬಗ್ಗೆ ಕಾರಣಗಳನ್ನು ನೀಡಬೇಕು. ಆರೋಗ್ಯಕರ ಸಂವಾದದಿಂದ, ಆಗ ಮಾತ್ರ ಅವರು ಇತರರ ದೃಷ್ಟಿಕೋನಗಳನ್ನು ಗೌರವಿಸುವ ಪ್ರಾಮುಖ್ಯವನ್ನು ಕಲಿಯುತ್ತಾರೆ. ಅವರು ತಮ್ಮಷ್ಟಕ್ಕೆ ತಮ್ಮದೇ ಕಲ್ಪನೆಗಳು ಮತ್ತು ಅನಿಸಿಕೆಗಳನ್ನು ಕಾಳಜಿಯಿಂದ ಕಾರ್ಯರೂಪಕ್ಕೆ ತಂದಾಗಲಷ್ಟೇ, ವಿವೇಚನೆಯಿಂದ ಮಾತುಕತೆ ಮತ್ತು ತಾಳ್ಮೆಯಿಂದ ವಿಚಾರ ವಿನಿಮಯ ಮಾಡುವ ಹಿಂದಿನ ಉದ್ದೇಶವನ್ನು ಅನುಭವಿಸಲು ಸಾಧ್ಯ. ಶಾಲೆ, ಪಠ್ಯಪುಸ್ತಕಗಳು ಮತ್ತು ಸುತ್ತಲಿನ ಪರಿಸರ ಬಾಲ್ಯವನ್ನು ಪ್ರತಿನಿಧಿಸುವ ಮತ್ತು ಅದನ್ನು ನಿರ್ವಹಿಸುವುದನ್ನು ಪುನರ್ ಪರಿಶೀಲಿಸುವ ಅಗತ್ಯವೂ ಇದೆ. ಬೆಳೆಯುವ ಮಕ್ಕಳನ್ನು ಗೌರವ ಮತ್ತು ಕಾಳಜಿಯಿಂದ ಕಾಣದಿದ್ದರೆ, ಅವರು ಇತರರಿಗೆ ಗೌರವ ಕಾಳಜಿ ತೋರಿಸಲಾರರು.

**ಪ್ರಸ್ತುತ ಪಠ್ಯಪುಸ್ತಕಗಳು ಮತ್ತು ಸವಾಲುಗಳು**

ಭಾರತದಲ್ಲಿ ಪಠ್ಯಪುಸ್ತಕಗಳು ಯಾವಾಗಲೂ ಯಜಮಾನ್ಯದ, ತಿರುಚಿದ, ಶ್ರೀಮಂತ ಜೀವನಶೈಲಿಯನ್ನು ಅಪೇಕ್ಷಿಸುವ ಮತ್ತು ಮಹತ್ತ್ವಾಕಾಂಕ್ಷೆ ಹೊಂದುವಂತೆ ಬಿಂಬಿತವಾಗಿವೆ. ಅವುಗಳ ವಸ್ತು, ಬಹುಸಂಖ್ಯಾತ ಮಕ್ಕಳನ್ನು ನಾಜೂಕಾಗಿ ಮತ್ತು ಸ್ಥೂಲವಾಗಿ ಹೊರಗಿಡುವಂತಿರುತ್ತದೆ. ನಾನು ಕೆಲವು ಉದಾಹರಣೆಗಳನ್ನು ಕೊಡುತ್ತೇನೆ:

- 'ವೋ ಗರೀಬ್ ಥಾ ಪರ್ ಇಮಾನ್‌ದಾರ್ ಥಾ' (ಅವನು ಬಡವನಾದರೂ ಪ್ರಾಮಾಣಿಕನಾಗಿದ್ದ)

ಹಾಗೆಯೇ, 'ಆದಿವಾಸಿ ಜಂಗಲ್ ಮೆ ರಹ್ತೇ ಹೈ ಔರ್ ಕಂದ್ ಮೂಲ್ ಖಾತೇ ಹೈ' (ಆದಿವಾಸಿಗಳು ಕಾಡಿನಲ್ಲಿ ಜೀವಿಸುತ್ತಾರೆ ಮತ್ತು ಗೆಡ್ಡೆಗೆಣಸುಗಳನ್ನು ತಿನ್ನುತ್ತಾರೆ)

ಅಥವಾ

‘ಲಡ್ಕೀ ಹೋತೇ ಹುಯೀ ಭಿ ವಹ್ ಲಡ್ಕೋಂ ಸೇ ಸಬ್ ಖೇಲ್ ಖೇಲ್ತೀ ಥೀ’ (ಹುಡುಗಿಯಾಗಿದ್ದರೂ ಅವಳು ಹುಡುಗರ ಎಲ್ಲ ಆಟಗಳನ್ನೂ ಆಡುತ್ತಾಳೆ)

ಅಥವಾ

‘ಲಡ್ಕೀ ಹೋತೇ ಹುಯಿ ಭಿ ಬಹಾದೂರ್ ಥೀ’ (ಹುಡುಗಿಯಾದರೂ ಅವಳು ಧೈರ್ಯಶಾಲಿಯಾಗಿದಾಳೆ)

ಅಥವಾ

‘ದಿವಾಲಿ ಭಾರತ್ ಕಾ ತ್ಯೋಹಾರ್ ಹೈ ಔರ್ ಈದ್ ಹಮಾರೇ ಮುಸಲ್ಮಾನ್ ಭಾಯಿ ಮಾನತೇ ಹೈ’ (ದೀಪಾವಳಿ ಭಾರತದ ಹಬ್ಬವಾಗಿದ್ದು, ಈದ್ ಅನ್ನು ನಮ್ಮ ಮುಸಲ್ಮಾನ ಸಹೋದರರು ಆಚರಿಸುತ್ತಾರೆ)

ಇದಲ್ಲದೆ, ಅರಸರು, ಅವರ ಹೋರಾಟಗಳ ಕತೆಗಳು ಮತ್ತು ಕಲ್ಪನೆಗಳಿಂದ ತುಂಬಿದ ಅವರ ಧೈರ್ಯದ ಕತೆಗಳು ಪುಸ್ತಕದುದ್ದಕ್ಕೂ ಹರಡಿಕೊಂಡಿರುತ್ತವೆ. ಅವರು ಯುದ್ಧದಲ್ಲಿ ಸೋತ ಕಾರಣದಿಂದ ಅನ್ಯಾಯವಾಗಿ ಅನುಭವಿಸಿದ ಕಷ್ಟನಷ್ಟಗಳ ಬಗ್ಗೆ ಗುಪ್ತವಾದ, ನಯವಾದ ಸಂದೇಶಗಳು ತುಂಬಿರುತ್ತವೆ. ಕೆಲವೊಮ್ಮೆ, ಅವರು ಬಹಳ ನತದೃಷ್ಟರಾಗಿದ್ದು, ಅವರಿಗೆ ಮಾತ್ರ ಕಠಿಣ ಪರಿಸ್ಥಿತಿ ಎದುರಾಗಿತ್ತು ಎಂಬಂತೆ ಅದನ್ನು ವಿವರಿಸಲಾಗಿರುತ್ತದೆ. ಶಾಲೆಗಳಲ್ಲಿ ಕೊಡುವ ಮಧ್ಯಾಹ್ನದ ಊಟವೊಂದೇ ಮಕ್ಕಳ ಉಳಿವಿಗೆ ಆಧಾರವಾಗಿರುವ ಮತ್ತು ತೀವ್ರಮಟ್ಟದ ಅಪೌಷ್ಟಿಕತೆ ತಡೆಯುವ ಕ್ರಮ ಆಗಿರುವ ದೇಶವೊಂದರಲ್ಲಿ ಇಂತಹ ಅತಿರೇಕಗಳು ಭಾರಿ ಅಸಮಾನವಾಗಿ ಕಾಣುತ್ತವೆ.

ಇದರೊಂದಿಗೆ, ಪಠ್ಯಪುಸ್ತಕಗಳು ಸಾಮಾನ್ಯವಾಗಿ ಶ್ರೀಮಂತರಿಗೆ ಮತ್ತು ಶಕ್ತಿಶಾಲಿಗಳಿಗೆ ತುಂಬ ಕರುಣೆ ತೋರುತ್ತವೆ, ಅವರನ್ನು ಸಾಮಾನ್ಯವಾಗಿ ಒಳ್ಳೆಯವರೆಂದು ಚಿತ್ರಿಸಿ, ದಯಾಳುಗಳೂ, ಧಾರಾಳಿಗಳೂ ಎಂದು ಬಿಂಬಿಸುತ್ತವೆ. ಆದರೆ ಬಡವರ ಅಸಮಾನತೆ, ಅನ್ಯಾಯ, ಹೆದರಿಕೆಯ ಬಗ್ಗೆ ಅಲ್ಲದೆ, ಈ ಬಹುಸಂಖ್ಯಾತರ ಮೇಲೆ ಶ್ರೀಮಂತರಿಂದ ನಡೆಯುವ ಶೋಷಣೆ ಬಗ್ಗೆ ಚರ್ಚಿಸಲು ಅಸಹ್ಯಪಡುತ್ತವೆ. ಅವು ಜಾತಿ ತಾರತಮ್ಯದಂತಹ ವಾಸ್ತವಿಕ ಉದಾಹರಣೆಗಳ ಬಗ್ಗೆ ಚರ್ಚಿಸುವುದಿಲ್ಲ ಅಥವಾ ಜನರನ್ನು ಮತ್ತು ಸಂಪನ್ಮೂಲಗಳನ್ನು ಯಾವ ರೀತಿ ಶೋಷಣೆ ಮಾಡಲಾಗುತ್ತಿದೆ ಎಂಬ ಬಗ್ಗೆ ಪಠ್ಯಪುಸ್ತಕಗಳು ಚರ್ಚಿಸುವುದಿಲ್ಲ. ಅವು ಬಡತನವನ್ನು ಬಿಂಬಿಸುವುದಿಲ್ಲ ಮತ್ತು ಅವಕಾಶವಂಚಿತ ಜನರ ಬಗ್ಗೆ ಅಥವಾ ಅವರು ತಮ್ಮ ಪರಿಸ್ಥಿತಿ ಸುಧಾರಿಸಿಕೊಳ್ಳಲು ಮಾಡುವ ಹೋರಾಟವನ್ನೂ ಚಿತ್ರಿಸುವುದಿಲ್ಲ. ಆದರೆ ರಾಜ್ಯವು ತನ್ನ ಕಾರ್ಯಸೂಚಿಯನ್ನು ಮುಂದಕ್ಕೆ ಕೊಂಡೊಯ್ಯಲು ಏನು ಹೇಳಬೇಕೋ ಅದನ್ನು ಹೇಳುತ್ತವೆ. ಆಡಳಿತಗಳು ಬದಲಾದಾಗ ಪಠ್ಯಪುಸ್ತಕದ ಬಿಕ್ಕಟ್ಟು ಎದುರಾಗುವುದು ಸಂಸ್ಕೃತಿ ಮತ್ತು ಇತಿಹಾಸದ ಕೆಲವು ಅತಿರೇಕದ ಅಂಶಗಳ ಸುತ್ತ ಮಾತ್ರ. ಉಳಿದ ಎಲ್ಲ ಮಾಹಿತಿ, ಜ್ಞಾನದ ಆಯ್ಕೆಯೂ ಒಳಗೊಂಡು, ಅದನ್ನು ಪ್ರಸ್ತುತಪಡಿಸುವ ರೀತಿ ಎಲ್ಲವೂ ಬದಲಾಗದೇ ಯಥಾಪ್ರಕಾರ ಉಳಿಯುತ್ತದೆ. ಯಾವುದೇ ರೂಪದಲ್ಲಾದರೂ ಸಮುದಾಯದ ಜ್ಞಾನವನ್ನು ಬಳಸಿಕೊಳ್ಳುವ ಪರ್ಯಾಯ ಮಾರ್ಗ ನಿರ್ಮಿಸುವ ಪ್ರಯತ್ನ - ಕನಿಷ್ಠ ಪಕ್ಷ ಅದರ ಸತ್ಯಾಸತ್ಯತೆಯನ್ನು ಅರಿಯಲಿಕ್ಕಾದರೂ- ನಡೆಯುವುದೇ ಇಲ್ಲ. ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆಯಲ್ಲಿ ಹೆಚ್ಚು ಪಾಲ್ಗೊಳ್ಳುವುದು ಮತ್ತು ಎಲ್ಲ ಬಗೆಯ ಹಿನ್ನೆಲೆಯುಳ್ಳ ಮಕ್ಕಳನ್ನು ಒಳಗೊಂಡು ಪಾಲ್ಗೊಳ್ಳುವತ್ತ ಸಾಗುವ ಪ್ರಯತ್ನದಲ್ಲಿ ಹಿನ್ನೆಲೆಗೆ ಸರಿದುಹೋಗುವ ಸಾಧ್ಯತೆ ಇದೆ.

ಬಹುಸಂಖ್ಯಾತ ಮಕ್ಕಳ ವಾಸ್ತವದ ಅರ್ಥಪೂರ್ಣ ಪ್ರಾತಿನಿಧ್ಯದ  ಗೈರಿನಲ್ಲಿ ಶ್ರೀಮಂತರಲ್ಲದ ಮಕ್ಕಳನ್ನು ಆದರ್ಶಪ್ರಾಯರಾಗಿ ಬಿಂಬಿಸಲು ಅಥವಾ ಆ ಮಕ್ಕಳಲ್ಲಿ ತಮ್ಮ ಅಥವಾ ತಮ್ಮ ಸಮುದಾಯದ ಅಸ್ತಿತ್ವ ಹಾಗೂ ಹೆಮ್ಮೆಯ ಪ್ರಜ್ಞೆಯನ್ನು ಬೆಳೆಸಲು ಪಠ್ಯಪುಸ್ತಕ ಮತ್ತು ಶಾಲಾ ಕಾರ್ಯಕ್ರಮಗಳಿಗೆ ನೆರವಾಗಲು ಯಾವುದೇ ಮಾರ್ಗವಿಲ್ಲದಂತಾಗಿದೆ. ಅವು ಮಕ್ಕಳಲ್ಲಿ ಯಾವುದೇ ಭರವಸೆ ಮತ್ತು ಉದ್ದೇಶವನ್ನಾಗಲಿ, ಅವರ ಬದುಕಿನ ಇಕ್ಕಟ್ಟಿನ ಪರಿಸ್ಥಿತಿಯಿಂದ ಹೊರಬರುವಂತಹ ಪಾತ್ರದ ಸಾಧ್ಯತೆಯ ನಿಟ್ಟಿನಲ್ಲಿ  ಕನಸು ಕಾಣಲು, ಕಲ್ಪಿಸಿಕೊಳ್ಳಲು ನೆರವಾಗುವುದಿಲ್ಲ. ಇನ್ನು ಕೆಲವು ಕಾರಣಗಳಿಂದಾಗಿ, ಪಠ್ಯಪುಸ್ತಕಗಳು ಸೌಮ್ಯವಾಗಿಯೂ, ರಾಜಕೀಯವಾಗಿ ನಯವಾಗಿಯೂ ಇರಬೇಕು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪಠ್ಯಪುಸ್ತಕಗಳು ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲು ಸಹಕರಿಸುತ್ತವೆ. ಅವು ಪರ್ಯಾಯ ದೃಷ್ಟಿಕೋನಗಳನ್ನು ಬಿಂಬಿಸುವುದೂ ಇಲ್ಲ ಅಥವಾ ಪ್ರಾಬಲ್ಯಗಳನ್ನು ಪ್ರಶ್ನಿಸುವುದೂ ಇಲ್ಲ. ಆ ಅರ್ಥದಲ್ಲಿ, ಅವು ಪ್ರಜಾಸತ್ತಾತ್ಮಕ ಪೌರತ್ವದ ಅಗತ್ಯ  ಅಂಶಗಳಾದ ವಿಮರ್ಶೆ ಮತ್ತು ಚರ್ಚೆಗಳಂತಹ ಮಹತ್ತ್ವದ ಅಂಶಗಳನ್ನು ಒದಗಿಸಲು ವಿಫಲವಾಗಿವೆ. ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವ ಹಂತದಲ್ಲಿನ ಸರಿ ಮತ್ತು ತಪ್ಪುಗಳ ಪಟ್ಟಿಯನ್ನು ಮಾಡುವ, ಯಾಂತ್ರಿಕ ಜರಡಿ ಹಿಡಿಯುವ ಮತ್ತು ವಾಸ್ತವವನ್ನೇ ಕಿತ್ತುಹಾಕಿ ನಿರೂಪಿಸುವ ಪ್ರಯತ್ನ ಮಾಡುತ್ತಾರೆ. ಆ ಮೂಲಕ ವಾಸ್ತವದ ಬಗ್ಗೆ, ವಿದ್ಯಾರ್ಥಿಗಳ ನಿಜಜೀವನದ ಅನುಭವಗಳ ಬಗ್ಗೆ ಸಂವಾದ ನಡೆಸುವ ಸಾಧ್ಯತೆಯನ್ನೂ ಕಿತ್ತುಹಾಕುತ್ತಾರೆ.

**ಮುಂದೆ ಸಾಗುತ್ತಲೇ ಹಿಂದೆ ಸರಿಯುವುದು**

ಇದನ್ನು ಹೇಳುವಾಗ ಕೂಡ ನಾನು, ಕಳೆದ ನಾಲ್ಕು ದಶಕಗಳಿಂದ  ಪಠ್ಯಪುಸ್ತಕಗಳಿಗೆ ಹೊಸ ರೂಪ ಕೊಡುವ ಪ್ರಯತ್ನಗಳು ನಡೆದಿರುವುದನ್ನು ಪ್ರಸ್ತಾವಿಸಲೇಬೇಕು. ಮಕ್ಕಳ ನಿಜಜೀವನದ ಅನುಭವಗಳನ್ನು ಅದರ ಭಾಗವಾಗಿಸುವ ಪ್ರಯತ್ನಕ್ಕೆ ಒತ್ತು ನೀಡಲಾಗಿದೆಯಲ್ಲದೆ, ತಾವು ಏನನ್ನು ಓದಲು ಬಯಸುತ್ತಾರೋ ಅವುಗಳ ಕತೆಗಳನ್ನೂ, ವಸ್ತುಗಳನ್ನು  ರಚಿಸಲು ಮಕ್ಕಳು ಶಿಕ್ಷಕರಿಗೆ ಅನುವು ಮಾಡಿಕೊಟ್ಟು, ಸಮುದಾಯವೂ ತಮ್ಮ ಅನುಭವಗಳನ್ನು ಹಂಚಿಕೊಳ್ಳುವಂತೆ, ನೈಜ  ಪ್ರಕರಣಗಳನ್ನು (ಕೇಸ್ ಸ್ಟಡಿ) ಪ್ರಸ್ತುತಪಡಿಸಲು, ವಸ್ತುನಿಷ್ಠ/ ವಾಸ್ತವ ಸಂಗತಿಗಳನ್ನು ಹೋಲುವ ಅಥವಾ ಬಿಂಬಿಸುವ ಕತೆಗಳನ್ನು ರಚಿಸಲು, ಚಿತ್ರಗಳು ಮತ್ತು ಹೆಸರುಗಳಲ್ಲಿ ಮಕ್ಕಳ ವೈವಿಧ್ಯಮಯ ಹಿನ್ನೆಲೆ ಬಿಂಬಿತವಾಗುವುದನ್ನು ಖಾತ್ರಿಪಡಿಸಿಕೊಳ್ಳಲು, ಮಹಿಳೆಯರು (ಮನೆಯ ಕೆಲಸವಷ್ಟೇ ಅಲ್ಲದೆ) ಮನೆಯಿಂದ ಹೊರಗೂ ಅಪಾರವಾಗಿ ದುಡಿಯುವುದರ ಬಗ್ಗೆ  ಸಂವೇದನಾಶೀಲರಾಗುವಂತೆ ಬುದ್ಧಿಪೂರ್ವಕ ಪ್ರಯತ್ನ ಮಾಡಲಾಗಿದೆ. ಅಷ್ಟಲ್ಲದೆ ಪ್ರಮುಖ ವ್ಯಕ್ತಿಗಳನ್ನು ಪರಿಹಾಸ ಮಾಡುವುದು, ತೀವ್ರವಾಗಿ ಪರಿಶೀಲಿಸಿದ ಮಾಹಿತಿ ನೀಡುವುದು  ಮತ್ತು ಮಕ್ಕಳು ಸ್ವತಃ ತಾವೇ ಮಾಡಬಹುದಾದ ಮನೆಗೆಲಸಗಳನ್ನು ನೀಡುವುದು ಮುಂತಾದವು ಇದರಲ್ಲಿ ಸೇರಿವೆ.

ಇಷ್ಟಾದರೂ, ಈ ಪ್ರಯತ್ನಗಳು ಏಕಮುಖವಾಗಿರುವುದಿಲ್ಲ. ಬದಲಿಗೆ, ಹೆಚ್ಚಿನ ಸಮನ್ವಯ, ಹೆಚ್ಚು ಪ್ರಾಸಂಗಿಕ ಮತ್ತು ಹೆಚ್ಚು ಪ್ರಜಾಸತ್ತಾತ್ಮಕ ಸಂವಾದೀಯವಾಗುವತ್ತ ಮುನ್ನಡೆಯುತ್ತವೆ. ಅವು ಬೇರೆ ಬೇರೆ ರೀತಿಯ ಮಧ್ಯಸ್ಥಿಕೆಗಳ ನಡುವೆ ವ್ಯತಿರಿಕ್ತವಾಗುವುದೂ, ಬದಲಾಗುವುದೂ ಉಂಟು. ಅವುಗಳನ್ನು ಪಠ್ಯಪುಸ್ತಕದಲ್ಲಿ ಕೊಟ್ಟಾಗಲೂ ಸಹ ಕೆಲವೊಮ್ಮೆ ನಿರ್ಲಕ್ಷ್ಯಕ್ಕೊಳಗಾಗುತ್ತವೆ ಅಥವಾ ಉದ್ದೇಶಪೂರ್ವಕವಾಗಿ ಪ್ರತಿರೋಧಿಸಲಾಗುತ್ತದೆ ಮತ್ತು ವಿರೋಧಿಸಲಾಗುತ್ತದೆ ಎಂಬುದನ್ನೂ ಗುರುತಿಸಬೇಕಾಗುತ್ತದೆ. ಪ್ರಜಾಸತ್ತಾತ್ಮಕ

ಶಾಲಾ ಕಾರ್ಯಕ್ರಮದ ಸವಾಲು, ನಿರ್ದಿಷ್ಟ ರಚನಾತ್ಮಕ ಸಾಮಗ್ರಿಗಳನ್ನು ಹೊಂದುವುದಷ್ಟೇ ಅಲ್ಲ, ಎಲ್ಲಕ್ಕಿಂತ ಮುಖ್ಯವಾಗಿ, ಯೋಜನೆಯನ್ನು ಅರ್ಥ ಮಾಡಿಕೊಂಡು, ಒಪ್ಪಿಕೊಂಡು ಹಾಗೂ ಸಹಾನುಭೂತಿಯಿಂದ ನಡೆದುಕೊಳ್ಳುವ ಶಿಕ್ಷಕರು ಹಾಗೂ ವ್ಯವಸ್ಥೆಯೂ ಇರಬೇಕಾಗಿರುವುದಾಗಿದೆ. ಒಂದು ವೇಳೆ ವ್ಯವಸ್ಥೆಯು, ನಿರ್ದಿಷ್ಟವಾಗಿ ಮೌಲ್ಯಮಾಪನವೂ ಸೇರಿದಂತೆ, ಬಹುಸಂಖ್ಯಾತ ಮಕ್ಕಳ, ಅಸ್ತಿತ್ವದಲ್ಲಿರುವ ಸಂಸ್ಕೃತಿ, ತಿಳಿವಳಿಕೆ ಮತ್ತು ಭಾಷೆಯನ್ನು ಅಲಕ್ಷಿಸುವ ಮತ್ತು ಅಪಹಾಸ್ಯ ಮಾಡುವ ಪ್ರಕ್ರಿಯೆಯಲ್ಲಿ ಪ್ರಬಲ ಆಧಿಪತ್ಯದ ದೃಷ್ಟಿಕೋನ ಹಾಗೂ ತಿಳಿವಳಿಕೆಯೇ, ಜ್ಞಾನವೇ ಸರಿಯಾದುದು ಎಂದು ಪರಿಗಣಿಸಲು ಯತ್ನಿಸುವುದಾದರೆ, ವಿಭಿನ್ನ ದೃಷ್ಟಿಕೋನಗಳು ಮತ್ತು ವಿಮರ್ಶಾತ್ಮಕ ಚರ್ಚೆಗಳಿಗೆ ಅವಕಾಶ ಕಲ್ಪಿಸುವ ಸಾಧ್ಯತೆಯನ್ನು ಬಿಂಬಿಸುವಂತೆ ಅತ್ಯಂತ ಎಚ್ಚರಿಕೆಯಿಂದ ರಚಿಸಲಾದ, ಸಮನ್ವಯ ಪಠ್ಯಪುಸ್ತಕಗಳು ಪ್ರಜಾಸತ್ತಾತ್ಮಕ ತರಗತಿಗಳನ್ನು ನಿರ್ಮಿಸುವುದು ಸಾಧ್ಯವೇ ಇಲ್ಲ.

**ನಮಗೆ ಬೇಕಾಗಿರುವುದು ಎಂತಹ ಪಠ್ಯಪುಸ್ತಕಗಳು?**

ಶಿಕ್ಷಣವನ್ನು ವೈಯಕ್ತಿಕ ವಿಮೋಚನೆ ಅಥವಾ ಪಲಾಯನದ ಉದ್ಯಮವಾಗಿ ನೋಡುವ ಪ್ರಸ್ತುತ ದೃಷ್ಟಿಕೋನಕ್ಕೆ ಸವಾಲೆಸೆಯುವಂತಹ ಪಠ್ಯಪುಸ್ತಕಗಳು ಬೇಕಾಗಿವೆ. ಸಮಷ್ಟಿ ಮತ್ತು ಸಮಾನತಾವಾದದ ದೃಷ್ಟಿಕೋನದ ಉದ್ದೇಶವುಳ್ಳ ಶಿಕ್ಷಣದ ಮೂಲಕ ಸಹಕಾರವನ್ನು ನಿರ್ಮಿಸಿ ಆ ನಿಟ್ಟಿನಲ್ಲಿ ವ್ಯವಹರಿಸುವಂತಿರಬೇಕು, ಪಠ್ಯಪುಸ್ತಕಗಳು. ಶಿಕ್ಷಣವನ್ನು ಸ್ಪರ್ಧಾತ್ಮಕವಾಗಿ ಸಂಘಟಿಸಿ, ಜರಡಿಯಂತೆ ಕಾರ್ಯನಿರ್ವಹಿಸಬೇಕೆಂದು ರಚಿಸಿದರೆ, ಗೆಲ್ಲಲಿಕ್ಕಾಗಿ ಹಮ್ಮಿಕೊಂಡ ಪಂದ್ಯದಂತೆ ಪರಿಗಣಿಸಿದರೆ, ಗರಿಷ್ಠ ಸಂಪನ್ಮೂಲಗಳು, ಅಧಿಕಾರ ಮತ್ತು ಸೌಕರ್ಯಗಳನ್ನು ಹೊಂದಿದ್ದರೆ, ಅದು ಸಮನ್ವಯ ಶಿಕ್ಷಣವಾಗಲಾರದು. ಭ್ರಾತೃತ್ವ, ಸೋದರತ್ವ ಅಥವಾ ಕೌಟುಂಬಿಕ ಮತ್ತು ಪ್ರಜಾಸತ್ತಾತ್ಮಕ ಭಾವಗಳು ಅಲ್ಲಿ ಸುಳಿಯಲಾರವು.

ಪಠ್ಯಪುಸ್ತಕಗಳು ಸಮಾಜದ ಅಸ್ವಸ್ಥತೆಗಳನ್ನು ಪರೀಕ್ಷಿಸಲು ಅಂದರೆ, ದುರಾಸೆಯನ್ನು, ಅನುಭೋಗೀಕರಣವನ್ನು ಬಹಿಷ್ಕಾರಗಳನ್ನು, ಇತರರ ಬಗ್ಗೆ ತಿರಸ್ಕಾರ ಭಾವನೆಗಳನ್ನು, ಆತಂಕ ಮತ್ತು ಭಯಗಳನ್ನು, ಭಿನ್ನ ಹಿನ್ನೆಲೆಯ ಅಥವಾ ಸಮುದಾಯಗಳಿಗೆ ವಿಚಾರಹೀನವಾಗಿ ಪ್ರತಿಕ್ರಿಯಿಸುವ, ಅಂಕೆ ಮೀರಿದ, ಲಿಂಗ ತಾರತಮ್ಯ, ಹಿಂಸಾಚಾರ ಇತ್ಯಾದಿಗಳನ್ನು ಪರೀಕ್ಷಿಸಲು ಶಿಕ್ಷಕರು ಮತ್ತು ಮಕ್ಕಳಿಗೆ ನೆರವಾಗುವಂತಿರಬೇಕು. ಇವುಗಳನ್ನು ಪರೀಕ್ಷಿಸಲು, ಅವುಗಳನ್ನು ಪ್ರಸ್ತುತಪಡಿಸಿ, ಬಳಿಕ ಚರ್ಚಿಸಬೇಕು ಅಷ್ಟೇ. ಅಂತಹ ಎಲ್ಲ ಬಗೆಯ ಅನಿಷ್ಟಗಳನ್ನು ನಿವಾರಿಸಲು ಪಠ್ಯಪುಸ್ತಕ ಶುಚಿಗೊಳಿಸುವುದು ಶಾಲೆಗಳನ್ನು ಹಲ್ಲಿಲ್ಲದ ಹಾವಿನಂತಾಗಿಸಿ, ಪ್ರಸಕ್ತ ಪರಿಸ್ಥಿತಿಗೆ ಸವಾಲು ಎಸೆಯಲು ಪರಿಗಣಿಸುವುದೂ ಅಸಾಧ್ಯವಾಗುತ್ತದೆ. ಹಾಗಾಗಿ, ಪಠ್ಯಪುಸ್ತಕಗಳಲ್ಲಿ ವಾಸ್ತವತೆಯಿರಬೇಕು, ಚರ್ಚೆಗೆ ತೆರೆದುಕೊಳ್ಳುವ ರಚನಾತ್ಮಕ ಸನ್ನಿವೇಶಗಳನ್ನು ಜಾಗ್ರತೆಯಿಂದ ಪ್ರಸ್ತುತಪಡಿಸಬೇಕು. ಈ ಹೊತ್ತಿನಲ್ಲಿ ನೆರವಾಗುತ್ತಿರುವ ಅಭಿಪ್ರಾಯಗಳಿಗೆ ಮತ್ತು ನಂಬಿಕೆಗಳಿಗೆ ಸವಾಲೆಸೆದು, ಶಿಕ್ಷಕರು ಅದೇ ರೀತಿ ಕೊಂಡೊಯ್ಯಲಿ ಎಂಬ ಅರ್ಥದಲ್ಲಿ ಅವು ಪ್ರಾಯೋಗಿಕವಾಗಿರಬೇಕು. ಸದ್ಯದ ಪರಿಸ್ಥಿತಿಗಳಿಗೆ ಎಸೆಯುವ ಸವಾಲಿನ ವ್ಯಾಪ್ತಿ ಮತ್ತು ಸ್ವರೂಪ, ಪ್ರಜಾಪ್ರಭುತ್ವ ಮತ್ತು ಒಳಗೊಳ್ಳುವಿಕೆಯ ಕಲ್ಪನೆಯನ್ನು ಕುರಿತ ಚರ್ಚೆಗಳನ್ನು ಹುಟ್ಟುಹಾಕುವುದು ಸೂಕ್ತ ಸಮಯ ಬಂದಾಗ ಹೆಚ್ಚು ಹೆಚ್ಚು ಪ್ರಖರವಾಗಬಹುದು. ಆದರೆ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಕ್ಕೆ

ರಾಜಕೀಯ ಮತ್ತು ಸಾಮಾಜಿಕ ಸವಾಲುಗಳು ಹೆಚ್ಚಿದಂತೆ ಇವೆಲ್ಲವೂ ಹಳೆಯ ಸ್ವರೂಪಕ್ಕೆ ಮರಳುವ ಅಪಾಯ ಸವಾಲಾಗುತ್ತಿರುವುದು.

***

ಪರಾಮರ್ಶನಗಳು


Anyon,J, (2011), Marx and Education, Routledge, New Delhi; Gandhi,MK, Towards New Education,Kumarappa Bharatan (1953), Navjivan Mudralaya, Ahmedabad

Dewan, HK and Dewan S, Socio-cultural Factors and Challenges-Poor Learning Among Socially Marginalised Children Conference, New Delhi (2016).

Henrich J. (2015). The Secret of Our Success: How Culture Is Driving Human Evolution, Domesticating Our Species, and Making Us Smarter New Jersey: Princeton University PressSadgopal A. Between question and clarity. New Delhi: Granth shilpi

NCERT (2005). National Curricular Framework. New Delhi: NCERT

NCERT (2005). Position paper on Work and Education. New Delhi: NCERT

Nirantar. (2009). Text Book Regimes – a feminist critique of nation and identity, New Delhi: Nirantar

Jain S. (2017 Rajasthan Textbooks Revised to Glorify Modi Government, The Wire.). https://thewire.in/education/rajasthan-textbooks-revised-glorifymodi-government

Shreya. (2019). BJP's major achievement in Rajasthan: Rewriting school textbooks to reflect RSS worldview, Scroll.in Sunday, February 10th 2019

Shreya. (2018). Inspired by the RSS, dictated by BJP minister: The inside story of Rajasthan's textbook revisions Scroll.in Sunday Nov 15, 2018

Kumar S.(2017). https://www.indiatoday.in/india/story/maharana-pratap-not-akbar-won-battle-of-haldighati-rajasthan-history-book-1026240-2017-07-25, July 2017

Sadgopal A. Between question and clarity. New Delhi: Granth shilpi

Sykes M. (1987). – The Story of Nai Talim: Fifty Years of Education at Sevagram; 1937-1987. Wardha: Sevagram.

Tomasello M. (2014). A Natural History of Human Thinking. Boston: Harvard University Press

Ambedkar B.R. (1949). Constituent Assembly Debates, Vol XI, 25 Nov. 1949, p. 979, as cited in Narrrain Arvind for Mool Prashan issue 1 on Constituent assembly debates, 2017, Udaipur (available in hindi)

**ಹೃದಯಕಾಂತ್ ದಿವಾನ್:** ಇವರು ಪ್ರಸ್ತುತ ಅಜೀಂ ಪ್ರೇಮ್‌ಜಿ ಯುನಿವರ್ಸಿಟಿಯ ಅನುವಾದ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಉದಯಪುರದ ಫೌಂಡಿಂಗ್ ಗ್ರೂಪ್ ಆಫ್ ಏಕಲವ್ಯದ ಸದಸ್ಯರೂ, ವಿದ್ಯಾ ಭವನ ಸೊಸೈಟಿಯ ಶೈಕ್ಷಣಿಕ ಸಲಹೆಗಾರರೂ ಆಗಿದ್ದಾರೆ. ಅವರು ಕಳೆದ 40 ವರ್ಷಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ವಿವಿಧ ನೆಲೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದು, ವಿಶೇಷವಾಗಿ ರಾಜ್ಯ ಶೈಕ್ಷಣಿಕ ರಚನಾ ವ್ಯವಸ್ಥೆಗಳಲ್ಲಿ, ಶಿಕ್ಷಣದಲ್ಲಿ ನಾವೀನ್ಯ ಮತ್ತು ಮಾರ್ಪಾಡು ತರುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಅವರ ಸಂಪರ್ಕಕ್ಕೆ: hardy.dewan@gmail.com

ಅನುವಾದ: ರೋಹಿಣಿ ಮುಂಡಾಜೆ ಪರಿಶೀಲನೆ: ನಾಗಮಣಿ ಎಸ್ ಎನ್